ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101
**RaithaBhavana, General Cariappa Circle, Gadag – 582 101**
**E-mail: ksrdpruadmissions@gmail.com Phone: 08372-230338, Fax: 08372-297343**

News about "World Food Day"celebration by KSRDPR University in association with *Krishi Vigyan Kendra (KVK)* Hulkoti, Dist: Gadag published in various Newspapers. Published Date : 20-10-2020

"Navodaya"

# ಪೌಷ್ಠಿಕ ಆಹಾರ ಸೇವನೆಯಿಂದ ಉತ್ತಮ ಆರೋಗ್ಯ ಕಂಡುಕೊಳ್ಳಿ

ಗದಗ, ಅ. 19. ಮನುಷ್ಯನ ಜೀವನಕ್ಕೆ ಆಹಾರ ಅವಶ್ಯಕವಾಗಿದ್ದು, ಪೌಷ್ಠಿಕ ಆಹಾರ ಸೇವನೆಯಿಂದ ಉತ್ತಮ ಆರೋಗ್ಯವನ್ನು ಕಂಡುಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಸಾಂಪ್ರದಾಯಿಕ ಆಹಾರ ಪದ್ದತಿ ಹೆಚ್ಚು ಮಹತ್ವವನ್ನು ಪಡೆದಿದೆ. ಜಗತ್ತಿನಲ್ಲಿ ದಾಸೋಹ ಪದ್ಧತಿಯನ್ನು ನಮ್ಮ ದೇಶದಲ್ಲಿ ಮಾತ್ರ ಕಾಣಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಹೇಳಿದರು.

ತಾಲೂಕಿನ ಹುಲಕೋಟಿ ಗ್ರಾಮದ ಕೆ.ಎಚ್. ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ವಿಶ್ವವಿದ್ಯಾಲಯವು ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದ



ಆಶ್ರಯದಲ್ಲಿ ಏರ್ಪಡಿಸಿದ್ದ ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮತನಾಡಿದರು.

ವಿಶ್ವ ಆಹಾರ ದಿನದ ಧ್ಯೇಯ ವಾಕ್ಯದ ಕುರಿತು ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಪ್ರೋಗ್ರಾಮ್ ಸಂಯೋಜಕರಾದ ಫಕೀರಮ್ಮ ಮುರಗೋಡ ವಿವರಿಸಿದರು.

ಎಸ್.ಜಿ. ಆದಾಪೂರ ಮಾತನಾಡಿ, ಆಹಾರ ಮಹತ್ವದ ಜೊತೆಗೆ ಕೃಷಿಯ ಮಹತ್ವವನ್ನು ತಿಳಿಸಿ, ಸಾವಯುವ ಕೃಷಿಗೆ ಹೆಚ್ಚು ಮಹತ್ವ ನೀಡಬೇಕು, ನಮ್ಮ ಆಹಾರವನ್ನು ನಾವೇ ಸಹಜ ರೀತಿಯಲ್ಲಿ ಕಂಡುಕೊಳ್ಳಬೇಕು ಎಂದರು.

ಡಾ. ಸುಜಾತಾ ಪಾಟೀಲ ಮಾತನಾಡಿ, ದಿನನಿತ್ಯದ ಆಹಾರ ಸೇವನೆಯಲ್ಲಿ ನಾವು ವಿಷಪೂರಿತ ಆಹಾರವನ್ನು ಸೇವಿಸುತ್ತಿದ್ದೇವೆ ಎಂದರಲ್ಲದೇ, ಆಹಾರ ಪದಾರ್ಥದ ಸೇವನೆ ಹಾಗೂ ಆಯುರ್ವೇದ ಅಂಶಗಳುಳ್ಳ ಪೌಷ್ಠಿಕ ಆಹಾರದ ಕುರಿತು ವಿವರಿಸಿದರು.

ವಿಷಯ ಪರಿಣಿತರಾದ ಡಾ.ಸುಧಾ ಮಂಕಣಿ ಪೌಷ್ಠಿಕ ಆಹಾರದ ಸೇವನೆ, ಮನುಷ್ಯನ ದೇಹಕ್ಕೆ ಬೇಕಾದ ಪೌಷ್ಠಿಕಾಂಶದ ಪ್ರಮಾಣ, ಸಿರಿಧ್ಯಾನಗಳ ಮಹತ್ವ ಹಾಗೂ ಅದರ ಉಪಯುಕ್ತತೆಗಳ ಕುರಿತು ಮಾಹಿತಿ ನೀಡಿ, ನೀವೇ ಬೆಳೆದ ಆಹಾರವನ್ನು ತಿನ್ನಿರಿ, ನೀವು ತಿನ್ನುವ ಆಹಾರವನ್ನು ಬೆಳೆಯಿರಿ ಎಂದರು.

ಆಹಾರ ಪದಾರ್ಥದ ಕಲಬೆರಿಕೆ ಹಾಗೂ ಶುದ್ಧ ಆಹಾರ ಪದಾರ್ಥಗಳ ಕುರಿತು ಪ್ರಾಯೋಗಿಕ ಪ್ರಾತ್ಯಕ್ಷಿತೆಯನ್ನು ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಉಪನ್ಯಾಸಕರಾದ ಡಾ.ಸಾವಿತ್ರಿ ಬ್ಯಾಡ... ಹಾಗೂ ಪ್ರಯೋಗಾಲಯದ ಸಹಾಯ... ಪ್ರದೀಪ ವಿದ್ಯಾರ್ಥಿ ಶಿವಕುಮಾರ ಲಮಾ... ನಿರೂಪಿಸಿದರು. ಉಪನ್ಯಾಸಕರಾದ ಫಕೀರ... ಮುರಗೋಡ ಸ್ವಾಗತಿಸಿದರು. ನಮಿ... ಎಮ್.ವಾಯ್. ವಂದಿಸಿದರು.

"Navodaya"

ಚಿಕ್ಕಹಂದಿಗೋಳದಲ್ಲಿ ವಿಶ್ವಾಹಾರ ದಿನಾಚರಣೆ

# ಔಷಧಿಯೇ ಆಹಾರವಾಗಬಾರದು: ಆಹಾರದಿಂದಲೇ ಪೌಷ್ಟಿಕಾಂಶ ಪಡೆಯಲು ಕರೆ

ಗದಗ,ಅ.19. ಮನೆಯಲ್ಲಿ ಪ್ರತಿನಿತ್ಯ ಸೇವಿಸುವ ಆಹಾರದಿಂದಲೇ ಮಾನವನದೇಹಕ್ಕೆಅವಶ್ಯವಿರುವ ಪೋಷಕಾಂಶಗಳನ್ನು ಪಡೆಯಬೇಕೆ ವಿನಹ: ಔಷಧಿಗಳೇ ಮಾನವನಆಹಾರವಾಗಬಾರದೆಂದುಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಸ್.ಜಿ.ಸಲಗೆರೆ ಹೇಳಿದರು.

ಸಮೀಪದ ಚಿಕ್ಕಹಂದಿಗೋಳ ಗ್ರಾಮದಲ್ಲಿ ಆಯುಷ್ ಕ್ಷೇಮ ಕೇಂದ್ರ ದಲ್ಲಿ ಜಿಲ್ಲಾ ಆಯುಷ್‌ಇಲಾಖೆ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತರಾಜ್ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿಜರುಗಿದ ವಿಶ್ವಆಹಾರ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಪ್ರಸ್ತುತ ಮಾನವರು ಸೇವಿಸುವ ಆಹಾರದಲ್ಲಿಕಲುಷಿತವಾಗುತ್ತಿದೆ. ಮಾನವರು ಹೆಚ್ಚಿನ ಬೆಳೆ ಬೆಳೆಯುವ ದುರಾಸೆಯಿಂದ ವಿವಿಧ ಕ್ರಿಮಿನಾಶಕಗಳ ...,ರಸಗೊಬ್ಬರಗಳನ್ನು ಬಳಕೆ ಮಾಡುತ್ತಿದ್ದಾರೆ.



ಭೂಮಿಯಲ್ಲಿನಪೋಷಕಾಂಶಗಳು ಹಾಳಾಗುತ್ತಿವೆ.ಉತ್ತಮ ಬೆಳೆ ಬೆಳೆಯುವ ಭರದಲ್ಲಿ ನಿಸತ್ವಆಹಾರವನ್ನು ಸೇವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.ಇದರಿಂದಾಗಿ ಸಮಾಜದಲ್ಲಿರೋಗ ರುಜಿನಗಳ ಪ್ರಮಾಣ ಹೆಚ್ಚಿದೆಯೆಂದು ವಿಷಾದಿಸಿದರು.

ಸತ್ವರಹಿತಆಹಾರ ಸೇವನೆಯಿಂದ ಔಷಧಿಗಳ ಸೇವನೆ ಅವಶ್ಯವಾಗಿದೆ. ಔಷಧಿಗಳೇ ಆಹಾರವಾಗಬಾರದು.ಮಾನವರ ಪ್ರತಿನಿತ್ಯದಆಹಾರವೇಔಷಧಿಯಾಗಿರುವದು ಇಂದಿನ ಅವಶ್ಯಕತೆಯಾಗಿದೆಯೆಂದು ಪ್ರತಿಪಾದಿಸಿದರು.

ಜಿಲ್ಲಾಆಯುಷ್ಅಧಿಕಾರಿಡಾ. ಸುಜಾತಾ ಪಾಟೀಲ ಮಾತನಾಡಿ ಮಾನವರು ಪ್ರತಿನಿತ್ಯ ವಿಷಪೂರಿತಆಹಾರವನ್ನು ಸೇವನೆ ಮಾಡುವ ಮೂಲಕ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಪೌಷ್ಟಿಕಾಂಶ ಯುಕ್ತ ಆಹಾರವನ್ನು ಸೇವಿಸಬೇಕು.ಜನರು ಇದಕ್ಕಾಗಿ ಯಾವದೇ ಹೆಚ್ಚಿನ ಹಣ ವ್ಯಯಿಸುವದುಅವಶ್ಯವಿಲ್ಲ, ಮನೆಯ ಅಡುಗೆ ಮನೆಯಲ್ಲಿದೊರೆಯುವಅರಿಷಿನ, ಜೀರಿಗೆ, ಹವೀಜ,ಶುಂಠಿ,ಹಿಪ್ಪಲಿ,ಮೆಣಸು ಸೇರಿದಂತೆ ಪ್ರತಿಯೊಂದು ವಸ್ತುವಿನಲ್ಲಿಯೂಔಷಧಿಯ ಗುಣಗಳಿವೆ. ಈ ವಸ್ತುಗಳನ್ನು ಸಮರ್ಪಕವಾಗಿ ಬಳಕೆ ಮಾಡುವ ಮೂಲಕ ನಿರೋಗಿಗಳಾಗುವಂತೆ ಸಲಹೆ ನೀಡಿದರು.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತರಾಜ್ ವಿಶ್ವವಿದ್ಯಾಲಯದಉಪನ್ಯಾಸಕಿಡಾ.ನಾಗವೇಣಿ ಮನೆಯ ತಾರಸಿಉದ್ಯಾನವನದ ಬಗ್ಗೆ ಉಪನ್ಯಾಸ ನೀಡಿದರು. ತೋಟಗಾರಿಕೆ ಇಲಾಖೆಯಅಧಿಕಾರಿ ಶಂಭುಲಿಂಗ, ಆಯುಷ್‌ಇಲಾಖೆಯ ವೈದ್ಯಾಧಿಕಾರಿ ಡಾ.ಸಂಜೀವ ನಾರಪ್ಪನವರ ಕೋರೋನಾ ಮುಂಜಾಗೃತೆಗಾಗಿ ಹೋಮಿಯೋಪಥಿ ಔಷಧಿಗಳನ್ನು ವಿತರಿಸಿ ಅವುಗಳನ್ನು ಉಪಯೋಗಿಸುವ ಬಗ್ಗೆ ವಿವರಿಸಿದರು.

ಪಂಚಾಯತರಾಜ್ ವಿಶ್ವವಿದ್ಯಾಲಯದ ಆಹಾರ ವಿಭಾಗದ ಸಂಯೋಜಕಿ ಫಕೀರಮ್ಮ ಮುರುಗೋಡ, ಆಯುಷ್ ಇಲಾಖೆಯ ಡಾ.ಪರ್ವತಗೌಡ ಹಿರೇಗೌಡರ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಸಾವಿತ್ರಿ, ನಮೀತಾ, ಡಾ.ಗೋಲಪ್ಪ ಮುಂತಾದವರು ಪಾಲ್ಗೊಂಡಿದ್ದರು. ಡಾ.ಕಮಲಾಕರ ಆರಳೆ ಸ್ವಾಗತಿಸಿ ನಿರೂಪಿ... ವಂದಿಸಿದರು.

“Kittur Karnataka”

# ಹುಲಕೋಟಿ: ವಿಶ್ವ ಆಹಾರ ದಿನಾಚರಣೆ



ಹುಲಕೋಟಿ, ೧೯ : ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವ ವಿದ್ಯಾಲಯ, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಆಹಾರ ದಿನಾಚರಣೆ ಕಾರ್ಯಕ್ರಮವನ್ನು ಕೃಷಿ ವಿಜ್ಞಾನ ಕೇಂದ್ರದ ಪ್ರಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಉದ್ಘಾಟನೆಯನ್ನು ಡಾ. ವಿಷ್ಣುಕಾಂತ ಎಸ್.ಚಟ್ಟಿಪಲ್ಲೆ, ಉಪ ಕುಲಪತಿಗಳು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವ ವಿದ್ಯಾಲಯ ಇವರು ನೆರವೇರಿಸಿದರು.

ಎಸ್.ಹೆಚ್.ಆದಾಪೂರ, ವಿಷಯ ತಜ್ಞರು, ಕೃಷಿ ವಿಸ್ತರಣೆ ವಿಭಾಗ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕೃಷಿ ಹಾಗೂ ಆಹಾರ ಕುರಿತು ಮಾತನಾಡಿದರು. ಸುಸ್ಥಿರ ಕೃಷಿ ಹಾಗೂ ಸಾವಯವ ಕೃಷಿಗೆ ಒತ್ತು ಕೊಡಬೇಕೆಂದು ತಿಳಿಸಿದರು. ಇನ್ನೋರ್ವ ಅತಿಥಿಗಳಾದ ಡಾ.ಸುಜಾತಾ ಪಾಟೀಲ, ಜಿಲ್ಲಾ ಆಯುಶ್ ಅಧಿಕಾರಿ, ಮಾತನಾಡಿ ಸಾವಯವ ಕೃಷಿ ಹಾಗೂ ರಾಸಾಯನಿಕ ಮುಕ್ತ ಆಹಾರಗಳ ಅವಶ್ಯಕತೆ ಹೆಚ್ಚಿದೆ. ದೇಸಿ ಆಹಾರಗಳು ಹಾಗೂ ಸಾಂಪ್ರದಾಯಿಕ ಆಹಾರಗಳು ಬಹಳ ಮುಖ್ಯ ಸಿರಿಧಾನ್ಯಗಳನ್ನು ಆಹಾರದಲ್ಲಿ ಹೆಚ್ಚು ಬಳಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ.ಸುಧಾ ಮಂಕಣಿ, ವಿಷಯ ತಜ್ಞರು, ಗೃಹ ವಿಜ್ಞಾನ ಇವರು ಆರೋಗ್ಯಕರ ಜೀವನಕ್ಕಾಗಿ ಉತ್ತಮ ಆಹಾರ ಕುರಿತು ಮಾತನಾಡಿದರು ಮತ್ತು ಮನೆ ಮದ್ದಾಗಿ ಮನೆಯಲ್ಲಿಯೇ ಕಷಾಯ ಪುಡಿಯನ್ನು ತಯಾರಿಸುವ ಪ್ರಾತ್ಯಕ್ಷಿಕೆಯನ್ನು ನೀಡಿದರು. ಅತಿಥಿ ಉಪನ್ಯಾಸಕರಾದ ದೀಪಾ ಪಾಟೀಲ ಮತ್ತು ಡಾ. ಸಾವಿತ್ರಿ ಬ್ಯಾಡಗಿ ಇವರು ಮಾರುಕಟ್ಟೆಯಲ್ಲಿ ದೊರೆಯುವ ಹಾಲು, ಸಕ್ಕರೆ, ಉಪ್ಪು, ಖಾರದ ಪುಡಿ ಇತ್ಯಾದಿ ಆಹಾರ ಪದಾರ್ಥಗಳಲ್ಲಿರುವ ಕಲಬೆರಕೆಯನ್ನು ಗುರುತಿಸುವ ಕುರಿತು ಪ್ರಾತ್ಯಕ್ಷಿಕೆಯನ್ನು ಮಾಡಿ ತೋರಿಸಿದರು. ಕಾರ್ಯಕ್ರಮದಲ್ಲಿ ಫಕೀರಮ್ಮ ಮುರಗೋಡ, ಮುಖ್ಯಸ್ಥರು, ಆಹಾರ ಮತ್ತು ಪೋಷಣೆ ವಿಭಾಗ ಇವರು ಕಾರ್ಯಕ್ರಮ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು. ಸಾಂಪ್ರದಾಯಿಕ ಆಹಾರ ಹಾಗೂ ಸಿರಿಧಾನ್ಯಗಳ ಅಡುಗೆ ವಿಶ್ವ ಆಹಾರ ದಿನಾಚರಣೆಯಲ್ಲಿ ಪ್ರಮುಖವಾಗಿತ್ತು. ವಿಶ್ವ ವಿದ್ಯಾಲಯದ ೯೨ ಜನ ಬೋಧನಾ ಸಿಬ್ಬಂದಿ ಮತ್ತು ಅತಿಥಿ ಉಪನ್ಯಾಸಕರು ಆಹಾರ ದಿನಾಚರಣೆಯಲ್ಲಿ ಭಾಗವಹಿಸಿ ಮಾಹಿತಿಯನ್ನು ...

“Kittur Karnataka”

ಚಿಕ್ಕಹಂದಿಗೋಳದಲ್ಲಿ ವಿಶ್ವಾಹಾರ ದಿನಾಚರಣೆ

# ಔಷಧಿಯೇ ಆಹಾರವಾಗಬಾರದು : ನ್ಯಾ. ಸಲಗರೆ




ಗದಗ, ೧೯ : ಮನೆಯಲ್ಲಿ ಪ್ರತಿನಿತ್ಯ ಸೇವಿಸುವ ಆಹಾರದಿಂದಲೇ ಮಾನವನ ದೇಹಕ್ಕೆ ಅವಶ್ಯವಿರುವ ಪೋಷಕಾಂಶಗಳನ್ನು ಪಡೆಯಬೇಕೆ ವಿನಹ: ಔಷಧಿಗಳೇ ಮಾನವನ ಆಹಾರವಾಗಬಾರದೆಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಸ್.ಜಿ.ಸಲಗೆರೆ ಪ್ರತಿಪಾದಿಸಿದರು.

ಸಮೀಪದ ಚಿಕ್ಕಹಂದಿಗೋಳ ಗ್ರಾಮದಲ್ಲಿ ಆಯುಷ್ ಕ್ಷೇಮ ಕೇಂದ್ರದಲ್ಲಿ ಜಿಲ್ಲಾ ಆಯುಷ್ ಇಲಾಖೆ,ಗ್ರಾಮೀಣಾಭೀವೃದ್ಧಿ ಹಾಗೂ ಪಂಚಾಯತರಾಜ್ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಜರುಗಿದ ವಿಶ್ವ ಆಹಾರ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಸತ್ವರಹಿತ ಆಹಾರ ಸೇವನೆಯಿಂದ ಔಷಧಿಗಳ ಸೇವನೆ ಅವಶ್ಯವಾಗಿದೆ. ಔಷಧಿಗಳೇ ಆಹಾರವಾಗಬಾರದು. ಮಾನವರ ಪ್ರತಿನಿತ್ಯದ ಆಹಾರವೇ ಔಷಧಿಯಾಗಿರುವದು ಇಂದಿನ ಅವಶ್ಯಕತೆಂತಾಗಿದೆಂತೆಂದು ಪ್ರತಿಪಾದಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಸುಜಾತಾ ಪಾಟೀಲ ಮಾತನಾಡಿ . ಮಾನವರು ಪೌಷ್ಟಿಕಾಂಶಯುಕ್ತ ಆಹಾರವನ್ನು ಸೇವಿಸಬೇಕು. ಜನರು ಇದಕ್ಕಾಗಿ ಯಾವದೇ ಹೆಚ್ಚಿನ ಹಣ ವ್ಯಯಿಸುವದು ಅವಶ್ಯವಿಲ್ಲ. ಮನೆಯ ಅಡುಗೆ ಮನೆಯಲ್ಲಿ ದೊರೆಯುವ ಅರಿಷಿನ,ಜೀರಿಗೆ,ಹವೀಜ,ಶುಂಠಿ, ಹಿಪ್ಪಲಿ,ಮೆಣಸು ಸೇರಿದಂತೆ ಪ್ರತಿಯೊಂದು ವಸ್ತುವಿನಲ್ಲಿಯೂ ಔಷಧಿಯ ಗುಣಗಳಿವೆ. ಈ ವಸ್ತುಗಳನ್ನು ಸಮರ್ಪಕವಾಗಿ ಬಳಕೆ ಮಾಡುವ ಮೂಲಕ ನಿರೋಗಿಗಳಾಗುವಂತೆ ಸಲಹೆ ನೀಡಿದರು.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತರಾಜ್ ವಿಶ್ವವಿದ್ಯಾಲಯದ ಉಪನ್ಯಾಸಕಿ ಡಾ.ನಾಗವೇಣಿ ಮನೆಯ ತಾರಸಿಉದ್ಯಾನವನದ ಬಗ್ಗೆ ಉಪನ್ಯಾಸ ನೀಡಿದರು. ತೋಟಗಾರಿಕೆ ಇಲಾಖೆಯ ಅಧಿಕಾರಿ ಶಂಭುಲಿಂಗ,ಆಯುಷ್ ಇಲಾಖೆಯ ವೈದ್ಯಾಧಿಕಾರಿ ಡಾ.ಸಂಜೀವ ನಾರಪ್ಪನವರ ಕೋರೋನಾ ಮುಂಜಾಗೃತೆಗಾಗಿ ಹೋಮಿಯೋಪಥಿ ಔಷಧಿಗಳನ್ನು ವಿತರಿಸಿ ಅವುಗಳನ್ನು ಉಪಯೋಗಿಸುವ ಬಗ್ಗೆ ವಿವರಿಸಿದರು.

ಗ್ರಾಮೀಣಾಭೀವೃದ್ಧಿ ಹಾಗೂ ಪಂಚಾಯತರಾಜ್ ವಿಶ್ವವಿದ್ಯಾಲಯದ ಆಹಾರ ವಿಭಾಗದ ಸಂಯೋಜಕಿ ಫಕೀರಮ್ಮ ಮುರುಗೋಡ. ಆಯುಷ್ ಇಲಾಖೆಯ ಡಾ.ಪರ್ವತಗೌಡ ಹಿರೇಗೌಡರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ.ಸಾವಿತ್ರಿ,ನಮೀತಾ,ಡಾ.ಗೋಲಪ್ಪ ಮುಂತಾದವರು ಪಾಲ್ಗೊಂಡಿದ್ದರು. ಡಾ.ಕಮಲಾಕರ ಅರಳೆ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕಿತ್ತೂರು ಕರ್ನಾಟಕ
ಕನ್ನಡ ದಿನಪತ್ರಿಕೆ
ತಪ್ಪದೇ ಓದಿರಿ